ಸನ್ 1907ನೆ ಇಸವಿ ಆಗಸ್ಟು ತಾರೀಖು 24ರಲ್ಲು ನಡದ ಡಿಸ್ಟ್ರಿಕ್ಟ ಬೋರ್ಡ್ ಮೀಟಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರ್, ಬಿ.ಎ., ಬಿ.ಎಲ್., ಪ್ರೆಸಿಡೆಂಟರು.
2. ,, ಬಿ. ವೆಂಕೋಬರಾವ್, ಬಿ.ಎ., ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾವ್, ಮಾಲೂರು ಡಿವೀಜ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಆರಾವಮುದ್ದಯ್ಯಂಗಾರ್, ಬಿ.ಎ., ಬಿ.ಎಲ್., ಚಿಕ್ಕಬಳ್ಳಾಪುರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರು.
5. ,, ಅಪ್ಪಾಧೂರೆ ಮೊದಲಿಯಾರ್ರು, ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು.
6. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಮುನಿನಾರಣಯ್ಯ ಕೆಟ್ಟರವರು, ಕೋಲಾರ.
2. ,, ರಾಮರಾಯರವರು, ಮಾಲೂರು.
3. ,, ದ್ಯೊಂತಿ ಚಿಕ್ಕಸುಬ್ಬಾಯಪ್ಪನವರು, ಕಿಡ್ಲಘಟ್ಟ.
4. ,, ಎಂ. ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಗೈಯ್ಯನವರು, ಬವರಿಂಗ್‌ಪೇಟೆ.
6. ,, ಮಹಮದ್‌ಹಸೇನ್‌ಸಾಹೇಬರವರು, ಶ್ರೀನಿವಾಸಪುರ.
7. ,, ಲಕ್ಷ್ಮಣರಾವ್, ಗುಡಿಬಂಡೆ.
8. ,, ರಾಮಣ್ಣನವರು, ಗೋರಿಬಿದನೂರು.
9. ,, ಪಿ. ಕೀನಪ್ಪ, ಬಾಗೇಪಲ್ಲಿ.

ಕ್ಲಾಸ್ (ಇ)

10. ಮೆ॥ ಬಸವೇಗೌಡರವರು, ಬವರಿಂಗ್‌ಪೇಟೆ.
11. ,, ವೆಂಕಟಸ್ವಾಮಿರಡ್ಡಿಯವರು, ಶ್ರೀನಿವಾಸಪುರ.

ಗೈರ್ ಹಾಜರು.

ಮೆ॥ ಗೋಪಾಲರಾಯರವರು, ಸ್ಕೂಲುಗಳ ಡೆಪ್ಯೂಟಿ ಇನ್‌ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಕಾಸ್ಟ್ ಹೈದರ್‌ಸಾಬರು, ಮುಳಬಾಗಲು.
,, ನಾರಾಯಣಶಾಸ್ತ್ರಿಮಿಕೆಟ್ಟ, ಚಿಕ್ಕಬಳ್ಳಾಪುರ.

ಕೆಳಗೆ ನಮೂದಿಸಿರುವ ಅಮಲದಾರ್ರುಗಳು ಹಾಜ್ರಾದ್ದರು.

1. ಮೆ॥ ಎಂ. ಎಸ್. ಪುಟ್ಟಣ್ಣನವರು, ಮುಳಬಾಗಲ.
2. ,, ವೈ. ನರಸಿಂಗರಾಯರು, ಶ್ರೀನಿವಾಸಪುರ.
3. ,, ಕೆ. ವೆಂಕಟಸಾಮಿ ಐಯ್ಯರ್, ಮಾಲೂರು.

(1) ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರು ಕೋಲಾರ ಡಿಸ್ಟ್ರಿಕ್ಟಿಗೆ ಹೆಪ್ಪದಲ್ಲಿಯೆ ದಯವಾಡಿಸುವರೆಂಬ ಶುಭ ವರ್ತಮಾನವನ್ನು ಕೇಳಿ ಬೋರ್ಡಿನವರೆಲ್ಲರೂ ತುಂಬಾ ಸಂತೋಷಚಿತ್ತರಾಗಿರುತ್ತಾರೆ. ಅಲ್ಲದೆ ಮಹಾಸ್ವಾಮಿಯವರಿಗೆ ಉಚಿತ ಮರ್ಯಾದೆಯೊಡನೆ ಎದುರುಮಾಡಿಕ್ಕೊಂಡು ತಮ್ಮ ರಾಜಭಕ್ತಿ ವಿಶ್ವಾಸವನ್ನು ತೋರ್ಪಡಿಸಲು, ಬಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಅಲ್ಲದೆ ಇದಕ್ಕಾಗಿ ಬೋರ್ಡಿನವರು 250 ರೂಪಾಯಿಗಳನ್ನು ಈ ಸಾಲ್ ಡಿಸ್ಟ್ರಿಕ್ಟ್ ಬೋರ್ಡ್ ಬಡ್ಜೆಟ್ಟಿನಿಂದ ಉಪಯೋಗಿಸಬಹುದೆಂದು ತೀರ್ಮಾನಿಸಲ್ಪಟ್ಟಿತು.

(2) ಕಳೆದ ಮೀಟಂಗ್ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

(3) ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಿಗಿ ಬಂದ 1907ನೆ ಫೆಬ್ರವರಿ ಮಾರ್ಚಿ ಮತ್ತು ಏಪ್ರಿಲ್ ಮಾಹೆಗಳ ಜಮೆಖರ್ಚು ಲೆಖ್ಖಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

(4) ದನಗಳ ಪ್ರದರ್ಶನೆಯಲ್ಲಿ ಬಹುಮಾನ ಹೊಂದಿದವರಿಗೆ ಕೊಡತಕ್ಕ ಸರ್ಟಿಫಿಕೇಟು ಮೇಲೆ ಒತ್ತುವೆ ಮುದ್ರೆಯ ವಿಷಯವಾಗಿ ಬೆಂಗಳೂರು ಡಿಸ್ಟ್ರಿಕ್ಟ ಬೋರ್ಡಿನವರ ತೀರ್ಮಾನವನ್ನು ಗಾರ್ನ್‌ಮೆಂಟ್‌ನವರು ಒಪ್ಪುವುದಾಗಿ ತಲಪುವ ಜುಲೈ 9ನೆ ತಾರೀಖಿನ 607–14—463–06ನ್ನು ಓದಿ ರಿಕಾರ್ಡು ಮಾಡಲಾಯಿತು. ಈ ಡಿಸ್ಟ್ರಿಕ್ಟ್‌ನಲ್ಲಿ ಉಪಯೋಗಿಸುವ ತೀರ್ಮಾನ ಮುದ್ರೆಯನ್ನು ಗಾರ್ನ್‌ಮೆಂಟಿಗೆ ಕಳುಹಿಸಬೇಕೆಂದು ನಿಶ್ಚಯಿಸಲ್ಪಟ್ಟಿತು.

(5) ಗ್ರಾಮಗಳ ರಸ್ತೆಗಳ ವಿಷಯವಾಗಿ ಮೈಸೂರು ಸೀಮೆಯ ರೆವಿನ್ಯೂ ಕಮಿಷನರ್ ಸಾಹೇಬರವರಿಂದ್ದ, ಕೊಡಲ್ಪಟ್ಟ ಸ್ಕೆಲ್ ಆರ್ಡರ್‌ನ್ನು ಪುಂಜುರಾತ್ಮಿಸಿದೆ ಎಂದು ಗಾರ್ನ್‌ಮೆಂಟಿನಿಂದ ತಲಪಿದ 64–72—180–6—5ನೆ ನಂಬರ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

(6) ಗ್ರಾನುಗಳ ಬಡಾವಣೆ, ಸ್ಥಳ ಬದಲಾಯಿಸುವಿಕೆ ಮತ್ತು ಹೊಸ ನಿವೇಶನ ಜುನಾಯಿಸುವಿಕೆ ಮೊದಲಾದ ಸಂಬಂಧಪಟ್ಟ ವಿಷಯಗಳು. ಡಿಸ್ಟ್ರಿಕ್ಟ್ ಬೋರ್ಡಿನವರ ಸಂಬಂಧವಿಲ್ಲದೆ ರವಿನ್ಯೂ ಇಲಾಖೆಯಿಂದಲೆ ನಡಿಸಬಹುದೆಂದು ತಲಪಿರುವ 478-87—127-06—07ನೆ ಜುಲೈ 15ನೆ ತಾರೀಖಿನ ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

(7) ಸ್ಯಾನಿಟೆರಿ ಇನ್ಸ್‌ಪೆಕ್ಟರ್‌ಗಳಾದ ವೆಂಕಟಸುಬ್ಬಣ್ಣಪ್ಪ, ಕೆ. ಆರ್. ಸುಬ್ರಹ್ಮಣ್ಯ ಐಯ್ಯರ್ ಮತ್ತು ನಾರಾಯಣಸ್ವಾಮಿ ನಾಯಿಡು ಎಂಬುವರಿಗೆ, ಅವರು ಬೆಂಗಳೂರಲ್ಲಿ ಟ್ರೈನಿಂಗಿಗೆ ಹೋಗಿದ್ದ ಕಾಲಕ್ಕೆ ವೂರಾ ಸಂಬಳವನ್ನು ಕೊಡಲು ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲು ಲಿವರ್ಟ್ ಮಾಡಬೇಕಾಗಿ ತಲಪಿದ ಆಗಸ್ಟು 3ನೆ ಮರ್ಕುಂ ಗೌರ್ನಮೆಂಟ್ ಪ್ರೊಸೀಡಿಂಗ್ಸ್ 1010-8—394-06—2ನೆ ನಂಬರ್ ಡಾಕೆಟ್ಟು ಓದಿ ಈ ಸಾಲಿನ ಬಜ್ಜಟ್ಟಿನಲ್ಲಿ ಹಣ ಸಾಲದ್ದರಿಂದ, ಗತ ಸಾಲಿನ ಬಜ್ಜಟ್ಟಿನಿಂದಲೆ ಹೊಬಲಗು ಕೊಡಬೇಕೆಂದು ಗೌರ್ನಮೆಂಟಿಗೆ ಬರೆಯಬೇಕೆಂದು ನಿರ್ಧರಿಸಲ್ಪಟ್ಟಿತು.

(8) ಕುನ್ನೂರನಲ್ಲಿರುವ ಪ್ಯಾಪ್ಯೂಸ್ ಇನ್‌ಸ್ಟಿಟ್ಯೂಟಿಗಾಗಿ 300 ರೂಪಾಯಿ ಕೊಡಲು, ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ರೆಸಲ್ಯೂಷ್ಯನ್ ಮೇಲೆ ಗೌರ್ನಮೆಂಟಿನವರು ಲೋಕಲ್ ಫಂಡ್ ಜನರಲ್‌ರವರಿಂದ 5 ವರ್ಷಗಳ ಪರಿಯಂತರವೂ ಸದರಿ ಧರ್ಮಶಾಲೆಗೆ ಸಾಲಿಯಾನ 500 ರೂಪಾಯಿಗಳನ್ನು ಕೊಡಲು ಮೊದಲೇ ಮಂಜೂರ್ಮಾಡಿರುವದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಲು ಅವಶ್ಯಕತೆ ಇರುವುದಿಲ್ಲವೆಂದು ತಲಪಿದ ಆಗಸ್ಟು 10ನೆ ಮರ್ಕುಂ 1352-9—658-06—2ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

(9) ಮೈಸೂರು ಸೀಮೆಯಲ್ಲಿ ಪಬ್ಲಿಕ್ ಹೆಲ್ತ್ ಡಿಪಾರ್ಟಿನ ಸ್ಥಾಪನೆಯನ್ನು ಮಂಜೂರ್ಮಾಡಿದ ಆಗಸ್ಟು 10ನೆ ಮರ್ಕುಂ 1378-92—93-06—2ನೆ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು. ಇದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಎಲ್ಲರಿಗೂ ತಿಳಿಸಲ್ಪಡುವರೆಂದು ಹೇಳಲಾಯಿತು.

(10) ದೊಡ್ಡದೊಡ್ಡ ಎಸ್ಟೇಟುಗಳಿಗೆ ಜೋಗತಕ್ಕ ರಸ್ತೆಗಳನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕಾಮಗಾರಿ ಮುಂತಾದ್ದನ್ನು ಮಾಡಿಸುವುದನ್ನು ನಿಲ್ಲಿಸಿಬಿಡತಕ್ಕ ವಿಷಯದಲ್ಲಿ ಅಭಿಪ್ರಾಯವನ್ನು ಕೇಳಿರುವ ಸೆಕ್ರಟೆರಿ ಸಾಹೇಬರವರ ಜನವರಿ 4ನೆ ತಾರೀಖು 6021-8—200-06—1ನೆ ನಂಬರ್ ಡಾಕೆಟ್ಟು ಓದಲಾಯಿತು. ಇಂಥಾ ಎಸ್ಟೇಟುಗಳು ಈ ಡಿಸ್ಟ್ರಿಕ್ಟಿನಲ್ಲಿ ಇಲ್ಲವಾದ್ದರಿಂದ ಗವರ್ನಮೆಂಟಿನವರಿಗೆ ಇದೇ ರೀತಿ ತಿಳಿಸಬಹುದೆಂದು ನಿರ್ಧರಿಸಲ್ಪಟ್ಟಿತು.

(11) ಶ್ರೀರಂಗಪಟ್ಟಣದ ಆಸ್ಪತ್ರೆಯಲ್ಲಿರುವ ಕಿಬ್ಬಂದಿಗಾಗಿಯೂ, ಮತ್ತು ಇತರ ಕೆಲಸಗಳಿಗೂ ತಗಲುವ ಖರ್ಚುವೆಚ್ಚನ್ನು, ಮತ್ತು ಕಿವಿಯಿಂದ ತರಿಸುವ ಔಷಧಗಳಿಗೆ ತಗಲುವ 200 ರೂಪಾಯಿ ಡಿಸ್ಟ್ರಿಕ್ಟ್ ಬೋರ್ಡಿನವರೆ ಕೊಡತಕ್ಕ ವಿಷಯದಲ್ಲಿಯೂ, ತಮ್ಮ ಅಭಿಪ್ರಾಯವನ್ನು ಮತ್ತು ಈ ಸಾಲ್ ಬಜ್ಜಟ್ಟಿನಲ್ಲಿ ಯಾವ ಬಾಬಿನಿಂದ ಮೊಬಲಗನ್ನು ಕೊಡಬೇಕೋ ತಿಳಿಸಬೇಕೆಂದು ತಲಪಿರುವ ಸೆಕ್ರಟೆರಿ ಸಾಹೇಬರವರ ಜುಲೈ 22ನೆ ತಾರೀಖು 633—96-06—6ನೆ ನಂಬರ್ ಡಾಕೆಟ್ಟು ಓದಿ ಈ ಸಾಲಿನ ಬಜ್ಜಟ್ಟಿನಲ್ಲಿ ನಮೂದಿಸಿರುವಂತೆ ಇಂಗ್ಲೀಷ್ ಔಷಧಿಗಾಗಿ 200 ರೂಪಾಯಿ ಕೊಡಬಹುದೆಂತಲೂ ಜಾಸ್ತಿ ಕೊಡಲು ಬೋರ್ಡಿನಲ್ಲಿ ಹಣವಿಲ್ಲವಂತಲೂ ಗವರ್ನಮೆಂಟಿಗೆ ಬರೆಯಬೇಕೆಂದು ನಿರ್ಧರಿಸಲ್ಪಟ್ಟಿತು.

(12) ಎಲ್ಲಂಪಲ್ಲಿ-ಜೇಳೂರು ರೋಡಿನ 15ನೆ ಮೈಲ್ 5-6ನೆ ಫರ್ಲಾಂಗುಗಳಲ್ಲಿ ನಡಿಯಬೇಕಾದ ಕಾಂಗಾಂಗೆ ತಯಾರಾದ 2,851 ರೂಪಾಯಿಗಳ ಅಂದಾಜನ್ನು ಕಂಟ್ರಾಕ್ಟರ್ ಸೈ ಬಗ್ಯೆ ಕಳುಹಿಸಿದ್ದ ಕೋಲಾರ ಡಿ|| ಎ|| ಇಂಜನೀಯರರವರ ಜುಲೈ 30ನೆ ಮರ್ಕುಂ 285ನೆ ನಂಬರ್ ಡಾಕೆಟ್ಟನ್ನು ಓದಿ ಸೈನಿಶಿ ವಾಪಸು ಮಾಡಬಹುದೆಂದು ತೀರ್ಮಾನಿಸಲ್ಪಟ್ಟಿತು.

(13) ರಾಯಲ್‌ಪಾಡಿನಲ್ಲಿರುವ ನೇಟೀವ್ ವೈದ್ಯಶಾಲೆಯನ್ನು ಗನನಪಲ್ಲಿಗೆ ವರ್ಗಾಯಿಸಬೇಕೆಂದು ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಓದಿ ಅದರಂತೆ ಸದರಿ ವೈದ್ಯಶಾಲೆಯನ್ನು ಗನನಪಲ್ಲಿಗೆ ವರ್ಗಾಯಿಸಲು ಒಪ್ಪಲಾಯಿತು.

(14) ಚಿಕ್ಕಬಳ್ಳಾಪುರದ ತಾಲ್ಲೂಕು ಕಂದವಾರದಲ್ಲಿ ಬಂದು ಭಾವಿಗಾಗಿ 40 ರೂಪಾಯಿನ ಸಪ್ಲಮೆಂಟಿ ಅಂದಾಜಾ ಓದಿ ಮಂಜೂರ್ಮಾಡಲಾಯಿತು.

(15) 1906—07ನೆ ಸಾಲು ಆಖೈರಿನಲ್ಲಿ ಪೂರೈಸಲ್ಪಡದೆ ನಿಂತ ಮತ್ತು 1907—08ನೆ ಸಾಲಿನಲ್ಲಿ ಅಪ್ರೋಪ್ರಿಯೇಷ್ ಮಾಡಬೇಕಾಗಿರುವ ರೆವಿನ್ಯೂ ಡಿಪಾರ್ಟುಮೆಂಟಿನ ಕಾಂಗಾರಿ ತಖ್ತೆಯೂ ಓದಿ ಗವರ್ನಮೆಂಟಿಗೆ ಸ್ಯಾಂಕ್ಷನ್ ಬಗ್ಯೆ ಕಳುಹಿಸಬೇಕೆಂದು ನಿರ್ಣಯಿಸಲ್ಪಟ್ಟಿತು.

(16) ಕೆಳಗೆ ನಮೂದಿಸುವ ತಾಲ್ಲೂಕು ಬೋರ್ಡು ರೆಜುಲ್ಯೂಷ್ಯನ್‌ಗಳನ್ನು ಓದಿ ನಿರ್ಣಯಿಸಲ್ಪಟ್ಟಿತು.

ತಾಲ್ಲೂಕು.	ತಾರೀಖು.
ಬೌರಿಂಗಪೇಟೆ	20—7—07
ಚಿಂತಾಮಣಿ	18—6—07
ಶ್ರೀನಿವಾಸಪುರ	24—6—07
ಬಾಗೇಪಲ್ಲಿ	27—6—07
ಗೌರಿಬಿದನೂರು	3—6—07
ಮಾಲೂರು	30—7—07
ಚಿಕ್ಕಬಳ್ಳಾಪುರ	29—6—07

(17) ಮುಂದಿನ ವಿಾಟಿಂಗನ್ನು ಸ್ ೧೯೦೭ನೆ ಇಸವಿ ಸೆಪ್ಟಂಬರ್ 23ನೆ ತಾರೀಖಿನಲ್ಲಿ ನಡಿಸಬಹುದೆಂದು ನಿಶ್ಚಯಿಸಲ್ಪಟ್ಟಿತು.

ಬಿ. ವೆಂಕೋಬರಾವ್,
ಫಾರ್ ಪ್ರೆಸಿಡೆಂಟ್.